ಸಾಕ್ಷಿಯನ್ನು ದಿನಾಂಕ **25-01-2024** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ RJM ವಕೀಲರಿಂದಃ**

ನಿಪಿ 4 ಸಾಕ್ಷಿಗೆ ತೋರಿಸಿ ಸದರಿ ರಶೀದಿಯಲ್ಲಿ ಏನು ಕಳುಹಿಸಲಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ನೋಡಿ ಈ ಕೇಸಿನ ನೋಟೀಸು ಕಳುಹಿಸಿರುತ್ತೇನೆ ಎಂದರು. ವಕೀಲರ ಮೂಲಕ ನೋಟೀಸು ಕಳುಹಿಸಿರುತ್ತೇನೆ ಎಂದರು.

ದೂರಿನಲ್ಲಿ ತಿಳಿಸಿರುವ ದಿನಾಂಕದಂದು ನೋಟೀಸು ಕಳುಹಿಸಿರುತ್ತೇನೆ. ಅದು ವಕೀಲರ ಮೂಲಕ ಕಳುಹಿಸಿರುತ್ತೇನೆ ಅದರ ಬಾಬ್ತು ನಿಪಿ 4 ರಶೀದಿ ಇರುತ್ತದೆ ಎಂದರು.

ನಾನು ಹಾಜರು ಪಡಿಸಿರುವ ನೋಟೀಸು ಹೊರತುಪಡಿಸಿ ಬೇರೆ ನೋಟೀಸು ಆರೋಪಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿರುವುದಿಲ್ಲ. ನಾನು ಎರಡು ಮೂರು ಕಂತುಗಳಲ್ಲಿ ನಗದಾಗಿ ಆರೋಪಿಗೆ ಹಣ ಕೊಟ್ಟಿರುತ್ತೆನೆ. ಸದರಿ ಮೊತ್ತವನ್ನು ನಾನು ನನ್ನ ಮಿಲ್ ನಲ್ಲಿ ಕೊಟ್ಟಿರುತ್ತೇನೆ. ಆರೋಪಿಯ ಮನೆ ರಿಪೇರಿಗೆ ಸಾಲ ಕೊಟ್ಟಿರುತ್ತೇನೆ. ಆರೋಪಿ ನನ್ನ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ದುಡ್ಡು ಕೊಟ್ಟ ಬಗ್ಗೆ ರಶೀದಿ ಪಡೆದುಕೊಂಡಿರುತ್ತೇನೆ . ಆರೋಪಿಯ ಮೇಲೆ ನಂಬಿಕೆ ಇದ್ದು, ಭದ್ರತೆಗೆ ದಾಖಲೆ ಪಡೆದಿರುವುದಿಲ್ಲ. ನಾನು ಬಡ್ಡಿಗೆ ಹಣ ಕೊಟ್ಟಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು ಅನುಮತಿಸಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಪುತ್ತೂರು, ದ.ಕ.